ಬೆಳಕಿನಲ್ಲಿ ನೋಡಿದ ಮೇಲೆಯೂ ಆಕೆಯ ಗುರುತು ಅರುಂಧತಿಗೆ ಹತ್ತಲಿಲ್ಲ. "ಯಾರು ನೀನು" ಕೇಳಬೇಕೆಂದುಕೊಂಡು ಅವಳ ಮುಖ ನೋಡಿದಳಾದರೂ ಉಸಿರು ಹೊರಡಲಿಲ್ಲ.

ಈ ಮಧ್ಯೆ ಮಣಿವೇಲುವಿಗು ಸದ್ದು ಕೇಳಿ ಎಚ್ಚರವಾಗಿ ಮಹಡಿಯಿಂದ ದಡದಡನೆ "ಏನಾಯಿತು" ಎನ್ನುತ್ತ ಬಂದ. ಅವನನ್ನು ನೋಡಿದವಳೇ ಆಕೆ ಇನ್ನಷ್ಟು ಜೋರಾಗಿ ಅಳತೊಡಗಿದಳು. ಮಣಿವೇಲು ಅವಳ ಮುಖ ನೋಡಿದ ತಕ್ಷಣಕ್ಕೆ ತೀರಾ ನಿರ್ಲಿಪ್ತ ದನಿಯಲ್ಲಿ "ನೀನಾ ಏನಾಯಿತು ಯಾಕಿಲ್ಲಿ ಬಂದೆ" ಎಂದು ಇದೆಲ್ಲ ಸಾಮಾನ್ಯ ಎನ್ನುವಂತೆ ಕೇಳಿದ. ಅರುಂಧತಿಗೆ ದಿಗಿಲಾಯಿತು. ಹೊತ್ತಿಲ್ಲದ ಹೊತ್ತಿನಲ್ಲಿ ತನ್ನ ಮನೆ ಪ್ರವೇಶಿಸಿ ಈಕೆ ಅಳುವುದನ್ನು ನೋಡಿದರೆ ಯಾರು ಏನೆಂದುಕೊಂಡಾರು ಎನ್ನುವ ಗೋಜಲಿಗೆ ಬಿದ್ದಳು. ಆದರೂ ಸಜ್ಜನರೆನ್ನಿಸಿಕೊಂಡವರು ಅಷ್ಟಿಷ್ಟು ಪಾಪ ಮಾಡಿದರೂ ಸಂಶಯಿಸದ ಜಗತ್ತಿನ ಬಗ್ಗೆ ಆಕೆಗೆ ಕೊಂಚ ಭಂಡ ಧೈರ್ಯವೂ ಇತ್ತು. ಯಾರೋ ಕ್ಲೈಂಟು ಇರಬಹುದು ಎಂದು ಪ್ರಪಂಚ ಊಹಿಸೀತು ಎಂದು ಆಕೆ ತನ್ನಲ್ಲಿ ತಾನೇ ಸಮಾಧಾನ ಪಟ್ಟುಕೊಳ್ಳುತ್ತ ನಿಂತಳಾದರೂ, ಮರುಕ್ಷಣವೇ ತನ್ನ ಮನೆಯ ಬಳಿಗೆ ಅಪ್ಪಿತಪ್ಪಿಯೂ ಯಾರೊಬ್ಬರೂ ಬರುವುದು ಮಣಿವೇಲುವಿಗೆ ಹಿಡಿಸುವುದಿಲ್ಲ. ಅವ ತನ್ನ ಗೆಳೆಯರನ್ನಾಗಲಿ ಯಾವುದೇ ಕ್ಲೈಂಟುಗಳನ್ನಾಗಲಿ ತಪ್ಪಿಯೂ ಮನೆಯ ಬಳಿ ಕರೆತರುವುದಿಲ್ಲ... ಆದರೆ ಇದೀಗ ಹೆಣ್ಣು ಮಗಳೊಬ್ಬಳು ಈ ಅವಸ್ಥೆಯಲ್ಲಿ... ಅದೂ ನಡು ರಾತ್ರಿಯಲ್ಲಿ?

"ಏನಿಷ್ಟು ಹೊತ್ತಿನಲ್ಲಿ ಮನೆಯ ಹತ್ತಿರ ಬರಬಾರದು ಅಂತ ಎಷ್ಟು ಬಾರಿ ಹೇಳಿಲ್ಲ" ತುಸು ಕೋಪದಲ್ಲಿ ಮಣಿವೇಲು ಅಧಿಕಾರಯುತವಾಗಿ ಪ್ರಶ್ನಿಸಿದ. ಅರುಂಧತಿಗೆ ಸ್ವರದ ಏರಿಳಿತ ಹಿತವೆನ್ನಿಸಲಿಲ್ಲ. ಅವ ಯಾವಾಗಲೂ ಹಾಗೆಯೇ. ಅಳುವ ಹೆಂಗಸರನ್ನು ದ್ವೇಷಿಸುತ್ತಾನೆ. ಕೈಲಾಗದವು, ಮಾತೆತ್ತಿದರೆ ಅಳುತ್ತವೆ ಎಂದು ಸಿಡುಕುತ್ತಾನೆ. ತಾನು ಅತ್ತಾಗಲೂ "ಕಣ್ಣೀರು ಆರಾಮದಲ್ಲಿ ಬರುತ್ತದೆಯೆಂಬ ಕಾರಣಕ್ಕೆ ಅಡ್ವಾಂಟೇಜ್ ತಗೋಬಾರದು, ಹೇಸಿಗೆ ಅದು" ಎನ್ನುತ್ತಾನೆ. ಹೀಗಾಗಿ ಒಂದರ್ಥದಲ್ಲಿ ತನ್ನ ಅಳು ಬತ್ತಿ ಹೋಗುವುದಕ್ಕೆ ಅವ ಪರೋಕ್ಷ ಕಾರಣವೂ ಆಗಿದ್ದಾನೆ. ಆದರೆ ತನಗೇನೋ ಸರಿ, ಪ್ರಪಂಚದ ಹೆಂಗಸರ ದುಃಖದ ಮೇಲೆಲ್ಲ ಜಬರುದಸ್ತು ತೋರುವುದು ಎಷ್ಟು ನ್ಯಾಯ?" ಎಂದುಕೊಳ್ಳುತ್ತ ಅರುಂಧತಿ ಮಣಿವೇಲುವನ್ನು ದಿಟ್ಟಿಸಿದಳು. ಅವನಿಗೆ ಅದು ಅರ್ಥವಾದಂತೆ ಕಾಣಲಿಲ್ಲ. ಆ ಹುಡುಗಿ ನಿಂತು ಬಿಕ್ಕುತ್ತಲೇ ಇದ್ದಳು. ಅರುಂಧತಿಗೆ ಪಿಚ್ಚೆನ್ನಿಸಿತು. ಹುಡುಗಿಯನ್ನು ತಾನೇ ಕರೆದುಕೊಂಡು ಹೋಗಿ ಸೋಫಾ ಮೇಲೆ ಕೂರಿಸಿ ಕುಡಿಯಲು ನೀರು ಕೊಟ್ಟು ಮುಲಾಮು ಹಚ್ಚತೊಡಗಿದಳು. ಅಷ್ಟರಲ್ಲಿ ಮಣಿವೇಲುವಿನ ನಿದ್ದೆಯ ಅಮಲು ಸ್ವಲ್ಪ ಇಳಿದಿತ್ತಾದ್ದರಿಂದ ಕೊಂಚ ಸಮಾಧಾನದಲ್ಲಿರುವಂತೆ ಕಂಡುಬಂದ. ಆದರೂ ಸಣ್ಣ ಅಸಹನೆಯ ಎಳೆಯೊಂದು ಅವನಲ್ಲಿರುವುದು ಆಕೆಯ ಗಮನಕ್ಕೆ ಬಂತು. ಇನ್ನು ಈ ಹುಡುಗಿ ತಡ ಮಾಡಿದರೆ ಆತ ಪುನಃ ಕೂಗಾಡಿಯಾನು ಎನ್ನುತ್ತ "ಯಾರು ಪುಟ್ಟಿ ನೀನು, ಏನಾಯಿತು?" ಎಂದಳು. ಮಣಿ ತಕ್ಷಣಕ್ಕೆ ಬಾಯಿ ಹಾಕಿ, "ಇವ್ಳು ಆ ಹನುಮಕ್ಕನ ಮಗಳು ಮಧುವಂತೀ" ಎಂದ.

ಅರುಂಧತಿಗೆ ತಕ್ಷಣಕ್ಕೆ ಹೊಳೆಯಲಿಲ್ಲವಾದರೂ ಹನುಮಕ್ಕ ನೆನಪಿಗೆ ಬಂದು "ಹೌದಾ" ಎಂದು ಕಣ್ಣು ಅಗಲಿಸಿದಳು. ಹನುಮಕ್ಕನ ವೈಯಕ್ತಿಕ ಸಂಗತಿ ಅರುಂಧತಿಗೆ ಏನೇನೂ ಗೊತ್ತಿಲ್ಲವಾದರೂ ಆಕೆ ಭದ್ರಾವತಿ ಅದರ ಸುತ್ತಮುತ್ತಲಿನ ಪಿಕ್ ಪಾಕೇಟರ್‌ಗಳಿಗೆ ಲೀಡರ್ ಎಂಬುವುದು ಗೊತ್ತಿತ್ತು. ಕನಿಷ್ಠ ಹದಿನೈದು ದಿನಕ್ಕೊಮ್ಮೆಯಾದರೂ ಅವಳ ಕುರಿತಾದ ಅಪರಾಧ ಸುದ್ದಿಗಳು ಪತ್ರಿಕೆಯಲ್ಲಿ ಬರುತ್ತಲೇ ಇರುತ್ತಿದ್ದವು. ಅದು ಮುಂಬೈ ಲೋಕಲ್‌ನ ಚೈನ್ ಸ್ನಾಚಿಂಗ್ ಆಗಿರಬಹುದು, ಬೆಂಗಳೂರಿನ ವ್ಯಾನಿಟಿ ಕಳ್ಳತನವಿರಬಹುದು. ಅಷ್ಟೇ ಏಕೆ ರಾಜ್ಯದ ಯಾವುದೇ ಮೂಲೆಯಲ್ಲಿಯೂ